Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


| | |
|---|---|
| **भाग IX** | **अनुभाग 1** |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| **सं–1** | **नई दिल्ली सोमवार, डिसेम्बर 22, 1986** | **पुष्य 1, 1908 (शक)** | **खन्ड–6** |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |


## MINISTRY OF LAW AND JUSTICE
### (Legislative Department)

New Delhi, October 30, 1986

The translations in Kannada of the following namely—(1) The All India Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1966

## (1966ರ ಅಧಿನಿಯಮ ಸಂಖ್ಯೆ. 18)

[29ನೇ ಮೇ, 1966.]

ಏಷ್ಯಾದ ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆ ಮತ್ತು ಅದರ ನಿರ್ವಹಣೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಂತರರಾಷ್ಟ್ರೀಯ ಒಪ್ಪಂದವನ್ನು ಕಾರ್ಯಗತಗೊಳಿಸುವುದಕ್ಕಾಗಿ ಒಂದು ಅಧಿನಿಯಮ.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1966 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ[1] ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಎ) "ಒಪ್ಪಂದ" ಎಂದರೆ, ಏಷ್ಯಾ ಅಭಿವೃದ್ಧಿ ಬ್ಯಾಂಕ್ ಎಂದು ಕರೆಯಲಾದ ಅಂತರಾಷ್ಟ್ರೀಯ ನಿಕಾಯದ ಸ್ಥಾಪನೆ ಹಾಗೂ ನಿರ್ವಹಣೆಯ ಸಲುವಾಗಿ ಮಾಡಿಕೊಂಡ ಒಪ್ಪಂದ;

(ಬಿ) "ಬ್ಯಾಂಕ್" ಎಂದರೆ, ಒಪ್ಪಂದದ ಮೇರೆಗೆ ಸ್ಥಾಪಿಸಲಾದ ಏಷ್ಯಾ ಅಭಿವೃದ್ಧಿ ಬ್ಯಾಂಕು.

**3. ಬ್ಯಾಂಕಿಗೆ ಸಂದಾಯಗಳು.–** (1) ಭಾರತದ ಸಂಚಿತ ನಿಧಿಯಿಂದ, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಯುಕ್ತ ವಿನಿಯೋಗವನ್ನು ಮಾಡಿದ ತರುವಾಯ,–

(ಎ) ಈ ಒಪ್ಪಂದದ 5ನೇ ಅನುಚ್ಛೇದದ 1, 2 ಮತ್ತು 3ನೇ ಪ್ಯಾರಾಗ್ರಾಫ್‌ಗಳ ಮೇರೆಗೆ ಕೇಂದ್ರ ಸರ್ಕಾರವು ಬ್ಯಾಂಕಿಗೆ ಸಂದಾಯ ಮಾಡಬೇಕಾದ ಚಂದಾಗಳನ್ನು;

[1] ಅಧಿಸೂಚನೆ ಸಂಖ್ಯೆಯನ್ನು ನೋಡಿ. ಎಸ್.ಒ. 3803(ಇ) ದಿನಾಂಕ: 8ನೇ ಡಿಸೆಂಬರ್, 1966. ಭಾರತ ರಾಜಪತ್ರ ವಿಶೇಷ ಸಂಚಿಕೆ ಭಾಗ–II, ವಿಭಾಗ–3(ii), ನ್ನು ನೋಡಿ.

(ಬಿ) ಈ ಒಪ್ಪಂದದ 16ನೇ ಅನುಚ್ಛೇದದ ಮೇರೆಗೆ ಕೇಂದ್ರ ಸರ್ಕಾರವು, ಬ್ಯಾಂಕಿಗೆ ಸಂದಾಯ ಮಾಡಬೇಕಾದ ಯಾವುದೇ ದಲ್ಲಾಳಿ ರುಸುಮನ್ನು, ಫೀಜನ್ನು ಅಥವಾ ಇತರ ವೆಚ್ಚಗಳನ್ನು;

(ಸಿ) ಈ ಒಪ್ಪಂದದ 25ನೇ ಅನುಚ್ಛೇದದ 1ನೇ ಪ್ಯಾರಾಗ್ರಾಫ್ ಮೇರೆಗೆ ಕೇಂದ್ರ ಸರ್ಕಾರವು ಬ್ಯಾಂಕಿಗೆ ಸಂದಾಯ ಮಾಡಬೇಕಾದ ಯಾವುವೇ ಮೊತ್ತಗಳನ್ನು

– ಸಂದಾಯ ಮಾಡುವ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಅಗತ್ಯವಾಗಬಹುದಾದಂಥ ಎಲ್ಲಾ ಮೊತ್ತಗಳನ್ನು ಸಂದಾಯ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು, ತಾನು ಹಾಗೆ ಮಾಡುವುದು ಸೂಕ್ತವೆಂದು ಭಾವಿಸಿದರೆ, ಈ ಒಪ್ಪಂದದ 6ನೇ ಅನುಚ್ಛೇದದ 3ನೇ ಪ್ಯಾರಾಗ್ರಾಫ್ ಮೂಲಕ ಉಪಬಂಧಿಸಿದಂತೆ ಅಂಥ ಯಾವುದೇ ಬಡ್ಡಿ ರಹಿತವಾದ ಮತ್ತು ವರ್ಗಾವಣೀಯಲ್ಲದ ನೋಟುಗಳನ್ನು ಅಥವಾ ಇತರ ಬಾಧ್ಯತೆಗಳನ್ನು ತಾನು ಸೂಕ್ತವೆಂದು, ಭಾವಿಸುವಂಥ ನಮೂನೆಯಲ್ಲಿ ಸೃಜಿಸಬಹುದು ಮತ್ತು ಬ್ಯಾಂಕಿಗೆ ಕೊಡಬಹುದು.

**4. ಈ ಬ್ಯಾಂಕಿಗೆ ರಿಸರ್ವ್ ಬ್ಯಾಂಕು ಠೇವಣಿ ಧಾರಕನಾಗಿರತಕ್ಕದ್ದು.**– ಭಾರತದ ರಿಸರ್ವ್ ಬ್ಯಾಂಕು, ಈ ಬ್ಯಾಂಕಿನ ಭಾರತೀಯ ಕರೆನ್ಸಿಯ ಹಿಡುವಳಿಗಳ ಠೇವಣಿ ಧಾರಕನಾಗಿರತಕ್ಕದ್ದು.

**5. ಬ್ಯಾಂಕಿಗೆ, ಸ್ಥಾನಮಾನ ಮತ್ತು ಕೆಲವು ಉನ್ಮುಕ್ತಿಗಳನ್ನು, ವಿನಾಯತಿಗಳನ್ನು ವಿಶೇಷಾಧಿಕಾರಗಳನ್ನು ಪ್ರಧಾನ ಮಾಡುವುದು ಮತ್ತು ಅದರ ಅಧಿಕಾರಿಗಳು ಮತ್ತು ಇತರ ನೌಕರರಿಗೆ ಕೆಲವು ಉನ್ಮುಕ್ತಿಗಳನ್ನು, ವಿನಾಯಿತಿಗಳನ್ನು ವಿಶೇಷಾಧಿಕಾರಿಗಳನ್ನು ಪ್ರಧಾನ ಮಾಡುವುದು.**– (1) ಇತರ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ, ಅನುಸೂಚಿಯಲ್ಲಿ ಕೊಟ್ಟಿರುವ ಒಪ್ಪಂದದ ಉಪಬಂಧಗಳು, ಭಾರತದಲ್ಲಿ ಕಾನೂನಿನ ಬಲ ಹೊಂದಿರತಕ್ಕದ್ದು:

ಪರಂತು, ಒಪ್ಪಂದದ 56ನೇ ಅನುಚ್ಛೇಧದಲ್ಲಿರುವುದು ಯಾವುದೂ.–

(ಎ) ಈ ಬ್ಯಾಂಕು, ಯಾವುದೇ ಸೀಮಾ ಸುಂಕವಿಲ್ಲದೆ ಸರಕುಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳುವುದಕ್ಕೆ ಮತ್ತು ಯಾವುದೇ ಪರಿಬಂಧವಿಲ್ಲದೇ ಅಲ್ಲಿ ಅದರ ತರುವಾಯ ಮಾರಾಟ ಮಾಡಲು ಹಕ್ಕುಳ್ಳದ್ದಾಗಿದೆಯೆಂದು; ಅಥವಾ

(ಬಿ) ಮಾರಾಟ ಮಾಡಿದ ಸರಕುಗಳ ಬೆಲೆಯ ಒಂದು ಭಾಗವಾಗಿರುವಂಥ ಸುಂಕಗಳಿಂದ ಅಥವಾ ತೆರಿಗೆಗಳಿಂದ ಯಾವುದೇ ವಿನಾಯಿತಿಯನ್ನು ಬ್ಯಾಂಕಿಗೆ ಪ್ರಧಾನ ಮಾಡುತ್ತದೆ ಎಂದು; ಅಥವಾ

(ಸಿ) ಸಲ್ಲಿಸಲಾದ ಸೇವೆಗಳಿಗಾಗಿ ವಾಸ್ತವವಾಗಿ ವೆಚ್ಚವಷ್ಟೇ ಆಗಿರುವಂಥ ಸುಂಕ ಅಥವಾ ತೆರಿಗೆಗಳಿಂದ ಯಾವುದೇ ವಿನಾಯಿತಿಯನ್ನು ಬ್ಯಾಂಕಿಗೆ ಪ್ರಧಾನ ಮಾಡುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿ ಕೊಟ್ಟಿರುವ ಒಪ್ಪಂದದ ಉಪಬಂಧಗಳ ಕ್ರಮಬದ್ಧವಾಗಿ ಮಾಡಿದ ಮತ್ತು ಅಂಗೀಕರಿಸಿದ ತಿದ್ದುಪಡಿಗಳಿಗೆ ಅನುಸಾರವಾಗಿ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

**6. ನಿಯಮ ರಚನಾಧಿಕಾರ.–** ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

**7. 5ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಗಳನ್ನು ಮತ್ತು 6ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದಿಡತಕ್ಕದ್ದು.–** 5ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು 6ನೇ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಿಗೆ ನಿಕಟೋತ್ತರವಾದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಅಥವಾ ಸಂದರ್ಭಾನುಸಾರ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಅಥವಾ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಅಧಿಸೂಚನೆ ಅಥವಾ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದಲ್ಲ. ಆದಾಗ್ಯೂ

ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯ ಆ ಅಧಿಸೂಚನೆಯ ಅಥವಾ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

**ಅನುಸೂಚಿ**

**(5ನೇ ಪ್ರಕರಣವನ್ನು ನೋಡಿ)**

**ಕಾನೂನಿನ ಬಲ ಹೊಂದತಕ್ಕ ಒಪ್ಪಂದದ ಉಪಬಂಧಗಳು**

**ಅಧ್ಯಾಯ–VIII**

**ಸ್ಥಾನಮಾನ, ಉನ್ಮುಕ್ತಿಗಳು, ವಿನಾಯಿತಿಗಳು ಮತ್ತು ವಿಶೇಷಾಧಿಕಾರಗಳು**

**ಅನುಚ್ಛೇದ 48**

**ಅಧ್ಯಾಯ ಉದ್ದೇಶ**

ಬ್ಯಾಂಕು, ತನ್ನ ಉದ್ದೇಶವನ್ನು ಪರಿಣಾಮಕಾರಿಯಾಗಿ ಈಡೇರಿಸುವುದಕ್ಕಾಗಿ ಮತ್ತು ಅದಕ್ಕೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನೇರವೇರಿಸುವುದಕ್ಕಾಗಿ, ಈ ಅಧ್ಯಾಯದಲ್ಲಿ ನಿರೂಪಿಸಿರುವ ಸ್ಥಾನಮಾನ ಉನ್ಮುಕ್ತಿಗಳು, ವಿನಾಯಿತಿಗಳು ಮತ್ತು ವಿಶೇಷಾಧಿಕಾರಗಳನ್ನು ಪ್ರತಿಯೊಂದು ಸದಸ್ಯ ದೇಶದ ರಾಜ್ಯ ಕ್ಷೇತ್ರದೊಳಗಿನ ಬ್ಯಾಂಕಿಗೆ ನೀಡತಕ್ಕದ್ದು.

**ಅನುಚ್ಛೇದ 49**

**ಕಾನೂನು ಸಮ್ಮತ ಸ್ಥಾನಮಾನ**

ಬ್ಯಾಂಕು, ಪೂರ್ಣ ನ್ಯಾಯಿಕ ವ್ಯಕ್ತಿತ್ವವನ್ನು ಹೊಂದಿರತಕ್ಕದ್ದು ಮತ್ತು ವಿಶಿಷ್ಟವಾಗಿ.–

(i) ಕರಾರನ್ನು ಮಾಡಿಕೊಳ್ಳುವ;

(ii) ಚರ ಹಾಗೂ ಸ್ಥಿರ ಸ್ವತ್ತುಗಳನ್ನು ಆರ್ಜಿಸುವ ವಿಲೆ ಮಾಡುವ; ಮತ್ತು

(iii) ಕಾನೂನು ಸಮ್ಮತ ವ್ಯವಹರಣೆಗಳನ್ನು ಹೂಡುವ

– ಪೂರ್ಣ ಸಾಮರ್ಥ್ಯವನ್ನು ಹೊಂದಿರತಕ್ಕದ್ದು.

## ಅನುಚ್ಛೇದ 50

## ನ್ಯಾಯಿಕ ವ್ಯವಹರಣೆಗಳಿಂದ ಉನ್ಮುಕ್ತಿ

1. ಹಣ ಸಾಲ ಪಡೆಯಲು, ಬಾಧ್ಯತೆಗಳಿಗೆ ಖಾತ್ರಿ ನೀಡಲು ಅಥವಾ ಮಾರಾಟ ಭದ್ರತೆಗಳನ್ನು ಕೊಳ್ಳಲು ಮತ್ತು ಮಾರಲು ಅಥವಾ ಒಟ್ಟಾಗಿ ಕೊಳ್ಳಲು ಈ ಬ್ಯಾಂಕು ತನ್ನ ಅಧಿಕಾರಗಳನ್ನು ಚಲಾಯಿಸುವುದರಿಂದಾಗಿ ಅಥವಾ ಆ ಸಂದರ್ಭದಲ್ಲಿ ಉದ್ಭವಿಸುವ ಸಂದರ್ಭಗಳನ್ನುಳಿದು ಇಂಥ ಸಂದರ್ಭಗಳಲ್ಲಿ ಬ್ಯಾಂಕು ಯಾವ ದೇಶದ ರಾಜ್ಯಕ್ಷೇತ್ರದಲ್ಲಿ ಅದರ ಪ್ರಧಾನ ಅಥವಾ ಶಾಖಾ ಕಚೇರಿಯನ್ನು ಹೊಂದಿರುವ ಅಥವಾ ಪ್ರೋಸೆಸ್ಸಿನ ಜಾರಿ ಅಥವಾ ನೋಟೀಸನ್ನು ಅಂಗೀಕರಿಸುವ ಉದ್ದೇಶಕ್ಕಾಗಿ ಏಜೆಂಟನನ್ನು ನೇಮಕ ಮಾಡಿರುತ್ತದೋ ಅಥವಾ ಭದ್ರತೆಗಳನ್ನು ಹೊರಡಿಸುತ್ತದೋ ಅಥವಾ ಭದ್ರತೆಗಳಿಗೆ ಖಾತರೀ ನೀಡಿರುತ್ತದೋ ಅಥವಾ ಆ ದೇಶದ ರಾಜ್ಯಕ್ಷೇತ್ರದ ಅಧಿಕಾರ ವ್ಯಾಪ್ತಿವುಳ್ಳ ಸಕ್ಷಮ ನ್ಯಾಯಾಲಯದಲ್ಲಿ ಬ್ಯಾಂಕಿನ ವಿರುದ್ಧವಾಗಿ ಕ್ರಮ ಕೈಗೊಳ್ಳಬಹುದು. ಈ ಬ್ಯಾಂಕು ಪ್ರತಿಯೊಂದು ರೀತಿಯ ಕಾನೂನು ಕ್ರಮದಿಂದ ಉನ್ಮುಕ್ತಿಯನ್ನು ಹೊಂದಿರತಕ್ಕದ್ದು.

2. ಈ ಅನುಚ್ಛೇದದ 1ನೇ ಪ್ಯಾರಾಗ್ರಾಫ್‌ನ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ಯಾರೇ ಸದಸ್ಯ ಅಥವಾ ಯಾರೇ ಸದಸ್ಯನ ಏಜನ್ಸಿ ಅಥವಾ ಮಾಧ್ಯಮದ ಮೂಲಕ ಅಥವಾ ಯಾರೇ ಸದಸ್ಯನ ಪರವಾಗಿ ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ಸದಸ್ಯನಿಂದ, ಸದಸ್ಯನ ಯಾವುದೇ ಏಜೆನ್ಸಿಯಿಂದ ಅಥವಾ ಮಾಧ್ಯಮದಿಂದ ಕ್ಲೇಮುಗಳನ್ನು ಪಡೆಯುತ್ತಿರುವ ಯಾವುದೇ ಸ್ವತ್ತು ಅಥವಾ ವ್ಯಕ್ತಿಯ ಮೂಲಕ ಬ್ಯಾಂಕಿನ ವಿರುದ್ಧವಾಗಿ ಯಾವುದೇ ಕ್ರಮ ಹೂಡತಕ್ಕದಲ್ಲ. ಬ್ಯಾಂಕು ಮತ್ತು ಅದರ ಸದಸ್ಯರುಗಳ ನಡುವಣ ವಿವಾದ ವಿಷಯಗಳ ಇತ್ಯರ್ಥಕ್ಕಾಗಿ ಈ ಒಪ್ಪಂದದಲ್ಲಿ ಅಥವಾ ಬ್ಯಾಂಕಿನ ಉಪವಿಧಿಗಳಲ್ಲಿ ಮತ್ತು ವಿನಿಯಮನಗಳಲ್ಲಿ ಅಥವಾ ಈ ಬ್ಯಾಂಕಿನೊಂದಿಗೆ ಮಾಡಿಕೊಂಡ ಕರಾರುಗಳಲ್ಲಿ ನಿಯಮಿಸಬಹುದಾದಂಥ ವಿಶೇಷ ಪ್ರಕ್ರಿಯಗಳನ್ನು ಸದಸ್ಯರುಗಳು ಅವಲಂಭಿಸತಕ್ಕದ್ದು.

3. ಬ್ಯಾಂಕಿನ ಸ್ವತ್ತು ಮತ್ತು ಆಸ್ತಿಗಳು ಎಲ್ಲೇ ಇದ್ದರೂ ಮತ್ತು ಯಾರೇ ಅವುಗಳನ್ನು ಹೊಂದಿದ್ದರೂ, ಬ್ಯಾಂಕಿನ ವಿರುದ್ಧವಾಗಿ ಅಂತಿಮ ತೀರ್ಮಾನ ಕೊಡುವ ಮೊದಲು ಎಲ್ಲ ರೀತಿಯ ಅಭಿಗ್ರಹಣ, ಜಪ್ತಿ ಮತ್ತು ಅಥವಾ ಅಮಲ್ಜಾರಿಯಿಂದ ಉನ್ಮುಕ್ತಿ ಹೊಂದಿರತಕ್ಕದ್ದು.

## ಅನುಚ್ಛೇದ 51

### ಆಸ್ತಿಗಳ ಉನ್ಮುಕ್ತಿ

ಈ ಬ್ಯಾಂಕಿನ ಸ್ವತ್ತು ಮತ್ತು ಆಸ್ತಿಗಳು ಎಲ್ಲೇ ಇದ್ದರೂ ಮತ್ತು ಯಾರೇ ಅವುಗಳನ್ನು ಹೊಂದಿದ್ದರೂ, ಕಾರ್ಯ ನಿರ್ವಾಹಕ ಅಥವಾ ವಿಧಾಯೀ ಕ್ರಮದ ಮೂಲಕ ಶೋಧನೆ, ಕಡ್ಡಾಯ ಕೋರಿಕೆ, ಅಧಿಹರಣ, ಸ್ವತ್ತುಹರಣ ಅಥವಾ ಇತರ ಯಾವುದೇ ರೀತಿಯಲ್ಲಿ ವಶಪಡಿಸಿಕೊಳ್ಳುವುದರಿಂದ ಅಥವಾ ಪುರೋಬಂಧದಿಂದ ಉನ್ಮುಕ್ತಿ ಹೊಂದಿರತಕ್ಕದ್ದು.

## ಅನುಚ್ಛೇದ 52

### ಪತ್ರಾಗಾರಗಳ ಉನ್ಮುಕ್ತಿ

ಬ್ಯಾಂಕಿನ ಪತ್ರಾಗಾರಗಲು ಮತ್ತು ಸಾಮಾನ್ಯವಾಗಿ ಅದಕ್ಕೆ ಸೇರಿದ ಅಥವಾ ಅದು ಹೊಂದಿದ ಎಲ್ಲಾ ದಾಖಲೆಗಳು, ಅವು ಎಲ್ಲೇ ಇದ್ದರೂ ಅನುಲ್ಲಂಘನೀಯವಾಗಿರತಕ್ಕದ್ದು.

## ಅನುಚ್ಛೇದ 53

### ಪರಿಬಂಧಗಳಿಂದ ಆಸ್ತಿಗಳ ವಿಮುಕ್ತಿ

ಈ ಬ್ಯಾಂಕಿನ ಉದ್ದೇಶ ಮತ್ತು ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನೆರವೇರಿಸುವುದಕ್ಕೆ ಅವಶ್ಯವಾಗುವಷ್ಟರ ಮಟ್ಟಿಗೆ ಈ ಒಪ್ಪಂದದ ಉಪಬಂಧಗಳಿಗೆ ಒಳಪಟ್ಟು ಬ್ಯಾಂಕಿನ ಎಲ್ಲಾ ಸ್ವತ್ತು ಮತ್ತು ಆಸ್ತಿಗಳು ಪರಿಬಂಧಗಳಿಂದ ವಿನಿಯಮನಗಳಿಂದ ನಿಯಂತ್ರಣಗಳಿಂದ ಮತ್ತು ಯಾವುದೇ ಸ್ವರೂಪದ ಸ್ಥಗಿತಗೊಳಿಸುವಿಕೆಯಿಂದ ವಿಮುಕ್ತನಾಗಿರತಕ್ಕದ್ದು.

## ಅನುಚ್ಛೇದ 54

### ಪತ್ರ ವ್ಯವಹಾರಗಳಿಗೆ ವಿಶೇಷ ಸ್ಥಾನಮಾನ

ಇತರ ಯಾರೇ ಸದಸ್ಯನ ಅಧಿಕೃತ ಪತ್ರ ವ್ಯವಹಾರಗಳ ಬಗ್ಗೆ ಬ್ಯಾಂಕು ಹೇಗೆ ನಡೆದು ಕೊಳ್ಳುವುದೋ ಅದಕ್ಕಿಂತ ಕಡಿಮೆ ಅನುಕೂಲಕರವಲ್ಲದಂತೆ ಪ್ರತಿಯೊಬ್ಬ ಸದಸ್ಯನೂ ಬ್ಯಾಂಕಿನ ಅಧಿಕೃತ ಪತ್ರ ವ್ಯವಹಾರಗಳ ಬಗ್ಗೆ ನಡೆದುಕೊಳ್ಳತಕ್ಕದ್ದು.

## ಅನುಚ್ಛೇದ 55

### ಬ್ಯಾಂಕು ನೌಕರ ವರ್ಗದ ಉನ್ಮುಕ್ತಿಗಳು ಮತ್ತು ವಿಶೇಷಾಧಿಕಾರಗಳು

ಬ್ಯಾಂಕಿಗೆ ನಿಯೋಗಿ ಮಂಡಲಿಗಳಲ್ಲಿ ಕಾರ್ಯಭಾರಗಳನ್ನು ನೇರವೇರಿಸುತ್ತಿರುವ ತಜ್ಞರನ್ನು ಒಳಗೊಂಡಂತೆ ಬ್ಯಾಂಕಿನ ಎಲ್ಲ ಗವರ್ನರರು, ನಿರ್ದೇಶಕರು, ಪರ್ಯಾಯಿಗಳು, ಅಧಿಕಾರಿಗಳು ಮತ್ತು ನಿಯೋಜಕರು.–

(i) ಬ್ಯಾಂಕು ಉನ್ಮುಕ್ತಿಯನ್ನು ಬಿಟ್ಟು ಕೊಟ್ಟ ಹೊರತು, ಅವರು ತಮ್ಮ ಅಧಿಕೃತ ಖಾತೆಯಿಂದ ನೆರವೇರಿಸಿದ ಕಾರ್ಯಗಳ ಸಂಬಂಧದಲ್ಲಿ ಕಾನೂನು ಕ್ರಮದಿಂದ ಉನ್ಮುಕ್ತಿ ಹೊಂದಿರತಕ್ಕದ್ದು.

(ii) ಅವರು ಸ್ಥಳೀಯ ನಾಗರಿಕರು ಅಥವಾ ರಾಷ್ಟ್ರೀಯರಲ್ಲದಿರುವಲ್ಲಿ ವಲಸೆ ಪರಿಬಂಧಗಳಿಂದ ಅನ್ಯದೇಶೀಯ ನೋಂದಣಿ ಅಗತ್ಯತೆಗಳಿಂದ ಮತ್ತು ರಾಷ್ಟ್ರೀಯ ಸೇವಾ ಬಾಧ್ಯತೆಗಳಿಂದ ಇತರ ಸದೃಶ ದರ್ಜೆ ಹೊಂದಿರಬಹುದಾದ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಮತ್ತು ನಿಯೋಜಿತರಿಗೆ ಸದಸ್ಯರು ಕೊಡಮಾಡುತ್ತಿರುವಂಥವೇ ಆದ ಉನ್ಮುಕ್ತಿಗಳನ್ನು ಮತ್ತು ವಿನಿಯಮಗಳ ಬಗ್ಗೆ ಕೊಡಮಾಡುತ್ತಿರುವಂಥವೇ ಸೌಲಭ್ಯಗಳನ್ನು ಅವರಿಗೆ ನೀಡತಕ್ಕದ್ದು.

(iii) ಪ್ರಯಾಣ ಸೌಲಭ್ಯಗಳಿಗೆ ಸಂಬಂಧಿಸಿ, ಸದೃಶ ದರ್ಜೆ ಹೊಂದಿರಬಹುದಾದ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಮತ್ತು ನಿಯೋಜಿತರಿಗೆ ಸದಸ್ಯರು ಕೊಡಮಾಡುತ್ತಿರುವಂಥವೇ ಆದ ಸೌಲಭ್ಯಗಳನ್ನು ಅವರಿಗೆ ನೀಡತಕ್ಕದ್ದು.

## ಅನುಚ್ಛೇದ 56

### ಕರ ಭಾರದಿಂದ ವಿನಾಯಿತಿ

1. ಬ್ಯಾಂಕು, ಅದರ ಆಸ್ತಿಗಳು, ಸ್ವತ್ತು, ವರಮಾನ ಮತ್ತು ಅದರ ಕಾರ್ಯಚರಣೆಗಳು ಮತ್ತು ವ್ಯವಹಾರಗಳು ಎಲ್ಲ ಕರಭಾರಗಳಿಂದ ಮತ್ತು ಎಲ್ಲಾ ಸೀಮಾ ಸುಂಕಗಳಿಂದ ವಿನಾಯಿತಿ ಹೊಂದಿರತಕ್ಕದ್ದು. ಬ್ಯಾಂಕು ಯಾವುದೇ ತೆರಿಗೆ ಅಥವಾ ಸುಂಕದ ಸಂದಾಯ ಅದನ್ನು ತಡೆಹಿಡಿಯುವುದು ಅಥವಾ ವಸೂಲಿಯ ಯಾವುದೇ ಹೊಣೆಯಿಂದಲೂ ಸಹ ವಿನಾಯಿತಿ ಹೊಂದಿರತಕ್ಕದ್ದು.

2. ಈ ಬ್ಯಾಂಕಿನ ಕಾರ್ಯಭಾರಗಳನ್ನು ನೆರವೇರಿಸುತ್ತಿರುವ ತಜ್ಞರನ್ನು ಒಳಗೊಂಡು, ನಿರ್ದೇಶಕರುಗಳು, ಪರ್ಯಾಯಿಗಳು, ಅಧಿಕಾರಿಗಳು ಅಥವಾ ಬ್ಯಾಂಕಿನ ನೌಕರರಿಗೆ ಬ್ಯಾಂಕು ಸಂದಾಯ ಮಾಡಿದ ಸಂಬಳಗಳು ಮತ್ತು ಉಪಲಬ್ಧಿಗಳ ಮೇಲೆ ಅಥವಾ ಅವುಗಳಿಗೆ ಸಂಬಂಧಿಸಿ, ತನಗೋಸ್ಕರ ಅಥವಾ ತನ್ನ ರಾಜಕೀಯ ಉಪ ವಿಭಾಗಗಳಿಗೋಸ್ಕರ ಈ ಬ್ಯಾಂಕು ಅಂಥ ಸದಸ್ಯ ದೇಶದ ನಾಗರಿಕರಿಗೆ ಅಥವಾ ರಾಷ್ಟ್ರೀಕರಿಗೆ ಸಂದಾಯ ಮಾಡತಕ್ಕ ಸಂಬಳಗಳ ಮೇಲೆ ಮತ್ತು ಉಪ ಲಭ್ಯಗಳ ಮೇಲೆ ತೆರಿಗೆ ವಿಧಿಸುವ ಹಕ್ಕನ್ನು ಉಳಿಸಿಟ್ಟುಕೊಂಡಿದೆ ಎಂಬ ಘೋಷಣೆಯನ್ನು ತನ್ನ ಅನು ಸಮರ್ಥನಾ ಅಥವಾ ಅಂಗೀಕಾರ ಪತ್ರದೊಡನೆ ಠೇವಣಿ ಇರಿಸಿದ ಸಂದರ್ಭಗಳಲ್ಲಿ ಹೊರತು, ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

3. ಅದರ ಮೇಲಣ ಯಾವುದೇ ಲಾಭಾಂಶ ಅಥವಾ ಬಡ್ಡಿಯೂ ಸೇರಿದಂತೆ ಈ ಬ್ಯಾಂಕ್ ಹೊರಡಿಸಿದ ಯಾರೇ ಹೊಂದಿರುವ ಯಾವುದೇ ಬಾದ್ಯತೆ ಅಥವಾ ಭದ್ರತೆಯ ಮೇಲೆ.

(i) ಬ್ಯಾಂಕು ಹೊರಡಿಸಿದೆಯೆಂಬ ಕಾರಣ ಮಾತ್ರದಿಂದಲೇ ಅಂಥ ಭಾದ್ಯತೆ ಅಥವಾ ಭದ್ರತೆಯ ವಿರುದ್ಧ ತಾರತಮ್ಯ ತೋರುವಲ್ಲಿ; ಅಥವಾ

(ii) ಅಂಥ ಕರಭಾರಕ್ಕೆ ಕರೆನ್ಸಿಯನ್ನು ಹೊರಡಿಸಿದ ಸಂದಾಯ ಮಾಡಬಹುದಾದ ಅಥವಾ ಸಂದಾಯ ಮಾಡಿದ ಸ್ಥಳ ಅಥವಾ ಈ ಬ್ಯಾಂಕು ನಡೆಸಿಕೊಂಡು ಬಂದಿರುವ ಯಾವುದೇ ಕಚೇರಿ ಅಥವಾ ವ್ಯವಹಾರ ಸ್ಥಳವು ಅಧಿಕಾರ ವ್ಯಾಪ್ತಿಯ ಏಕೈಕ ಆಧಾರವಾಗಿರುವಲ್ಲಿ ಯಾವುದೇ ಬಗೆಯ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

4. ಅದರ ಮೇಲಣ ಯಾವುದೇ ಲಾಭಾಂಶ ಅಥವಾ ಬಡ್ಡಿಯೂ ಸೇರಿದಂತೆ ಈ ಬ್ಯಾಂಕು ಖಾತರಿ ನೀಡಿದ ಯಾರೇ ಹೊಂದಿದ ಯಾವುದೇ ಭಾದ್ಯತೆ ಅಥವಾ ಭದ್ರತೆಯ ಮೇಲೆ.

(i) ಅಂಥ ಬಾಧ್ಯತೆ ಅಥವಾ ಭದ್ರತೆಗೆ ಬ್ಯಾಂಕು ಖಾತರಿ ನೀಡಿದೆಯೆಂಬ ಕಾರಣ ಮಾತ್ರದಿಂದಲೇ ಅಂಥ ಬಾಧ್ಯತೆ ಅಥವಾ ಭದ್ರತೆಯ ವಿರುದ್ಧ ತಾರತಮ್ಯ ತೋರುವಲ್ಲಿ;

(ii) ಅಂಥ ಕರಭಾರಕ್ಕೆ ಬ್ಯಾಂಕು ನಡೆಸಿಕೊಂಡು ಬಂದಿರುವ ಯಾವುದೇ ವ್ಯವಹಾರ, ಕಚೇರಿ ಅಥವಾ ವ್ಯವಹಾರ ಸ್ಥಳವು ಅಧಿಕಾರ ವ್ಯಾಪ್ತಿಯ ಏಕೈಕ ಆಧಾರವಾಗಿರುವಲ್ಲಿ

– ಯಾವುದೇ ಬಗೆಯ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

## ಅನುಚ್ಛೇದ 58

### ಉನ್ಮುಕ್ತಿ, ವಿನಾಯಿತಿ ಮತ್ತು ವಿಶೇಷಾಧಿಕಾರಗಳನ್ನು ಬಿಟ್ಟುಕೊಡುವುದು

ಈ ಬ್ಯಾಂಕು ತನ್ನ ವಿವೇಚನಾನುಸಾರವಾಗಿ, ಯಾವುದೇ ಪ್ರಕರಣದಲ್ಲಿ ಅಥವಾ ಸಂದರ್ಭದಲ್ಲಿ ಬ್ಯಾಂಕಿನ ಸಂದರ್ಭದಲ್ಲಿ ಬ್ಯಾಂಕಿನ ಅತ್ಯುತ್ತಮ ಹಿತಾಸಕ್ತಿಗಳಿಗೆ ಸಮುಚಿತವಾಗಿದೆಯೆಂದು ಅದು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಈ ಅಧ್ಯಾಯದ ಮೇರೆಗೆ ಪ್ರದತ್ತವಾದ ಯಾವುದೇ ವಿಶೇಷಾಧಿಕಾರ, ಉನ್ಮುಕ್ತಿ ಮತ್ತು ವಿನಾಯಿತಿಗಳನ್ನು ಬಿಟ್ಟುಕೊಡಬಹುದು.

* * * * * *